ಪತ್ರಿಕಾ ಪ್ರಕಟಣೆ

(ಬೆಂಗಳೂರು, 03-12-2021)

# ಕೆ ಆರ್ ಎಸ್ ಪಕ್ಷದಿಂದ ಎಸಿಬಿ ರದ್ದುಪಡಿಸಿ, ಲೋಕಾಯುಕ್ತ ಬಲಗೊಳಿಸಿ ಪ್ರತಿಭಟನೆ

ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಎಸಿಬಿಯು ಕೇವಲ ಕೆಳಹಂತದ ಕೆಲವೇ ಕೆಲವು ಅಧಿಕಾರಿಗಳ/ ನೌಕರರ ಮೇಲೆ ದಾಳಿ ಮಾಡುತ್ತದೆ. ಆದರೆ ನಂತರ ಬಹುತೇಕ ಪ್ರಕರಣಗಳಲ್ಲಿ ಶಿಕ್ಷೆಯಾಗುವುದಿಲ್ಲ. ಇನ್ನು ಭ್ರಷ್ಟ ಐಎಎಸ್/ಐಪಿಎಸ್ ಅಧಿಕಾರಿಗಳ ಮೇಲೆ ದಾಳಿ ನಡೆದ ಮತ್ತು ಪ್ರಕರಣ ದಾಖಲಿಸಿದ ಉದಾಹರಣೆಗಳಿಲ್ಲ. ದೂರು ನೀಡಿದರೆ ಸರಿಯಾದ ಸಾಕ್ಷ್ಯಗಳಿಲ್ಲ ಎಂದು ದೂರುಗಳನ್ನು ಮುಚ್ಚಿಹಾಕಲಾಗುತ್ತದೆ. ಈ ರೀತಿಯ ಕೆಲಸ ಮಾಡುವುದಕ್ಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಸರ್ಕಾರವು ಕೆಲಸ ಮಾಡುತ್ತಿದೆ ಎಂದು ಜನರಿಗೆ ಮಂಕುಬೂದಿ ಎರಚಲು ನೂರಾರು ಕೋಟಿ ವ್ಯಯಿಸಿ ಎಸಿಬಿ ಎಂಬ ನಾಟಕದ ಕಂಪನಿ ನಡೆಸಲಾಗುತ್ತಿದೆ. ಆದ್ದರಿಂದ "ಎಸಿಬಿ ರದ್ದುಪಡಿಸಿ, ಲೋಕಾಯುಕ್ತ ಬಲಗೊಳಿಸಿ" ಧರಣಿ ಮತ್ತು ಎಸಿಬಿಗೆ ಮುತ್ತಿಗೆ ಕಾರ್ಯಕ್ರಮವನ್ನು KRS ಪಕ್ಷದ ರಾಜ್ಯಾಧ್ಯಕ್ಷರಾದ ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಬೆಂಗಳೂರಿನ ಸುಬ್ಬಣ್ಣ ವೃತ್ತದ (ಮೌರ್ಯ ವೃತ್ತ) ಗಾಂಧಿ ಪ್ರತಿಮೆ ಬಳಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಕೆ ಆರ್ ಎಸ್ ಪಕ್ಷದ ರಾಜ್ಯಾಧ್ಯಕ್ಷರಾದ ರವಿ ಕೃಷ್ಣಾರೆಡ್ಡಿಯವರು ಮಾತನಾಡಿ, "ಎಸಿಬಿ 2016ರಲ್ಲಿ ಆರಂಭವಾದಾಗಿನಿಂದಲೂ ಇಲ್ಲಿಯವರೆಗೆ 2000ಕ್ಕಿಂತಲೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು, ಆದರೆ ಇದುವರೆವಿಗೂ ಶಿಕ್ಷೆಗೊಳಪಡಿಸಿದವರ ಸಂಖ್ಯೆ ಎರಡಂಕಿ ದಾಟುವುದಿಲ್ಲ. ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಉತ್ತಮ ವ್ಯವಸ್ಥೆಯಾಗಿದ್ದು ಲೋಕಾಯುಕ್ತವನ್ನು ಬಲಹೀನಗೊಳಿಸಿ ಎಸಿಬಿ ರಚಿಸಿದ್ದ ಸಿದ್ದರಾಮಯ್ಯನವರ ಕ್ರಮವನ್ನು ವಿರೋಧಿಸಿದ್ದ ಬಿಜೆಪಿ, ಅಧಿಕಾರಕ್ಕೆ ಬಂದ ತಕ್ಷಣ ಎಸಿಬಿ ರದ್ದುಗೊಳಿಸಿ, ಲೋಕಾಯುಕ್ತವನ್ನು ಬಲಗೊಳಿಸುವುದಾಗಿ ಹೇಳಿತ್ತು, ಆದರೆ ಅಧಿಕಾರಕ್ಕೆ ಬಂದು ವರ್ಷದ ಮೇಲಾದರೂ ಇದುವರೆವಿಗೂ ಈ ವಿಚಾರದ ಬಗ್ಗೆ ಗಮನವೇ ಇಲ್ಲ, ಬದಲಾಗಿ ಎಸಿಬಿಯನ್ನು ದುರ್ಬಳಕೆ ಮಾಡುವುದು ಮುಂದುವರೆಸಿದೆ. ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಿಗೆ ಮತ್ತು ಭ್ರಷ್ಟ ಅಧಿಕಾರಿಗಳಿಗೆ ಬಲವಾದ ಲೋಕಾಯುಕ್ತ ವ್ಯವಸ್ಥೆ ಬೇಕಿಲ್ಲ, ತಮ್ಮ ಅಧಿಕಾರಕ್ಕೆ ಮತ್ತು ಭ್ರಷ್ಟಾಚಾರಕ್ಕೆ ಕುತ್ತು ಬರುತ್ತದೆ ಎಂದು ನಾಟಕ ಕಂಪನಿಯಾದ ಎಸಿಬಿಯನ್ನು ನಡೆಸುತ್ತಿದ್ದಾರೆ. ಭ್ರಷ್ಟ ಜನಪ್ರತಿನಿಧಿಗಳ, ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಮೇಲೆ ದೂರು ನೀಡಿದರೆ, ಚಿಲ್ಲರೆ ಕಾರಣ ನೀಡಿ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತಿದೆ. ನಾವು 2021ರ ಫೆಬ್ರವರಿಯಲ್ಲಿ ಎಸಿಬಿಯ ಕಾರ್ಯವೈಖರಿಯನ್ನು , ಕಾರ್ಯಕ್ಷಮತೆಯನ್ನು ಬಹಿರಂಗಪಡಿಸಿದ ನಂತರ ಎಸಿಬಿಯು ಚುರುಕಾದಂತೆ ಕಂಡರೂ ಶಿಕ್ಷೆಗೊಳಪಡಿಸುವ ಪ್ರಮಾಣ ಏರಿಕೆಯಾಗಿಲ್ಲ ಮತ್ತು ಉನ್ನತಮಟ್ಟದ ಅಧಿಕಾರಿಗಳ ಹಾಗು ಜನಪ್ರತಿನಿಧಿಗಳ ವಿರುದ್ಧ ಸಾಕ್ಷಿ ಸಮೇತ ದೂರು ನೀಡಿದರೂ ಪ್ರಕರಣ ದಾಖಲಾಗುವುದಿಲ್ಲ.

131/2, 8th E Main, 4th Block, Jayanagara, Bengaluru – 560011
Ph: 7975625575 | contact.krsparty@gmail.com | www.krsparty.org

ಸ್ವತಂತ್ರ ತನಿಖಾ ಸಂಸ್ಥೆಯಾಗಬೇಕಿದ್ದ ಎಸಿಬಿ ಸರ್ಕಾರದ ಕೈಗೊಂಬೆಯಾಗಿ ಜನರಿಗೆ ಮಂಕುಬೂದಿ ಎರಚುವ ನಾಟಕ ಕಂಪನಿಯಂತೆ ಕೆಲಸ ಮಾಡುತ್ತಿದೆ, ಭ್ರಷ್ಟರನ್ನು ರಕ್ಷಿಸುವ ಕೆಲಸ ಮಾಡುತ್ತಿದೆ. ಒಂದು ದೂರು ದಾಖಲಿಸಲು ಕೂಡ ಸರ್ಕಾರದ ಅನುಮತಿ ಪಡೆಯಬೇಕಾಗಿದೆ. ಭ್ರಷ್ಟಾಚಾರದ ಪಾಲು ಪಡೆದಿರುವ ಉನ್ನತ ಅಧಿಕಾರಿಗಳು, ತಮ್ಮನ್ನು ತಾವೇ ಸಿಕ್ಕಿಹಾಕಿಸಿಕೊಳ್ಳಲು ಅನುಮತಿ ನೀಡುವುದನ್ನು ನಿರೀಕ್ಷಿಸಲಾಗುತ್ತದೆಯೇ?

ಸರ್ಕಾರವು ಎಸಿಬಿಯನ್ನು ತನ್ನ ಇಚ್ಛೆಯಂತೆ ನಡೆಸಿಕೊಳ್ಳುತ್ತಿದ್ದು, ಮನಬಂದಂತೆ ಎಸಿಬಿ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತಿದೆ. 2016ರಲ್ಲಿ ಆರಂಭವಾದಾಗಿನಿಂದಲೂ ಇಲ್ಲಿಯವರೆಗೆ 3 ಎಡಿಜಿಪಿಗಳನ್ನು, 3 ಐಜಿಪಿಗಳನ್ನು ಮತ್ತು ಬೆಂಗಳೂರು ನಗರ ಜಿಲ್ಲೆಯ 7 ಎಸ್ಪಿಗಳನ್ನು ವರ್ಗಾವಣೆ ಮಾಡಲಾಗಿದೆ. ತನಗೆ ಇಷ್ಟಬಂದ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಿಗೆ ವರ್ಗಾವಣೆ ಮಾಡಿಕೊಂಡು, ತನಗೆ ಬೇಕಾದ ಹಾಗೆ ಕೆಲಸ ಮಾಡಿಕೊಳ್ಳುತ್ತದೆ. ಇಂತಹ ಸಂಸ್ಥೆಯಿಂದ ಸ್ವತಂತ್ರ ಮತ್ತು ನ್ಯಾಯಯುತ ತನಿಖೆ ನಿರೀಕ್ಷಿಸಲು ಸಾಧ್ಯವಿಲ್ಲ.

ಇತ್ತೀಚೆಗೆ ಎಸಿಬಿಯು ಭ್ರಷ್ಟಾಚಾರದ ಕೂಪವಾಗಿರುವ ಮತ್ತು ಬೆಂಗಳೂರಿನ ಸಮಸ್ಯೆಗಳಿಗೆ ಕಾರಣರಾಗಿರುವ ಬಿಡಿಎ ಮೇಲೆ ದಾಳಿ ನಡೆಸಿ ಅಲ್ಲಿನ ಕೆಲವು ಅಕ್ರಮಗಳನ್ನು ಬಯಲು ಮಾಡಿದ್ದರು. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ಕೇವಲ ನಿವೇಶನ ಹಂಚಿಕೆ ಮತ್ತು ಭೂಸ್ವಾಧೀನ ವಿಭಾಗಗಳ ಮೇಲೆ ಮಾತ್ರ ದಾಳಿ ಮಾಡಿ ನೂರಾರು ಕಡತಗಳನ್ನು ಪರಿಶೀಲಿಸಿ ಅಕ್ರಮಗಳನ್ನು ಪತ್ತೆ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ, ಆದರೆ ಇದಕ್ಕಿಂತ ಹೆಚ್ಚಿನ ಭೃಷ್ಟಾಚಾರ ನಡೆಯುವ ವಿಭಾಗಗಳಾದ ನಗರ ಯೋಜನೆ (ಟೌನ್ ಪ್ಲಾನಿಂಗ್) ಮತ್ತು ಇಂಜಿನಿಯರಿಂಗ್ ವಿಭಾಗಗಳಿಗೆ ಕಾಲಿಟ್ಟಿಲ್ಲ ಮತ್ತು ಒಂದು ಕಡತವನ್ನು ಪರಿಶೀಲಿಸಿಲ್ಲ. ಈ ಬಿಡಿಎ ಪ್ರಕರಣದಲ್ಲಿ ಯಾವುದೇ ಒಬ್ಬ ಅಧಿಕಾರಿಯ ಅಥವಾ ನೌಕರನ ಮೇಲಾಗಲಿ ಪ್ರಕರಣ ದಾಖಲಾಗಿಲ್ಲ. ಈ ಹಿಂದೆ ಅಕ್ರಮ ಮಾಡಿದ್ದಾರೆ, ಅಂತಹವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಪ್ಪೆ ಸಾರಿಸುತ್ತಿದ್ದಾರೆ. ಬಿಡಿಎಯಲ್ಲಿ ಅಕ್ರಮಗಳನ್ನು ಮಾಡಿರುವ ಅಧಿಕಾರಿಗಳ ಮನೆಗಳ ಮೇಲಾಗಲಿ ಅವರ ಅಕ್ರಮ ಆಸ್ತಿಯನ್ನು ಬಯಲು ಮಾಡುವ ಕ್ರಮಕ್ಕೆ ಮುಂದಾಗಿಲ್ಲ. ಹಾಗೆಯೇ ಇತ್ತೀಚೆಗೆ 15 ಸರ್ಕಾರಿ ನೌಕರರ ಮನೆಗಳ ಮೇಲೆ ದಾಳಿ ಮಾಡಿ, ಹತ್ತಾರು ಕೋಟಿ ಅಕ್ರಮ ಆಸ್ತಿಯನ್ನು ಪತ್ತೆ ಮಾಡಿ, ಎಸಿಬಿ ಭ್ರಷ್ಟಾಚಾರ ನಿಗ್ರಹ ಮಾಡುತ್ತಿದೆ ಎಂದು ತೋರಿಸಿ, ರಾಜ್ಯದ ಇತಿಹಾಸದಲ್ಲೇ ಬ್ರಹ್ಮಾಂಡ ಭ್ರಷ್ಟಾಚಾರವಾದ ಬಿಟ್ ಕಾಯಿನ್ ಹಗರಣದಿಂದ ಜನರ ಗಮನ ಬೇರೆಡೆ ಸೆಳೆಯುವ ತಂತ್ರವಾಗಿದೆ" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಕೆ ಆರ್ ಎಸ್ ಪಕ್ಷದ ಉಪಾಧ್ಯಕ್ಷರಾದ ಲಿಂಗೇಗೌಡ ಎಸ್ ಎಚ್ ಅವರು ಮಾತನಾಡಿ, ಇಡೀ ದೇಶಕ್ಕೆ ಮಾದರಿಯಾಗಿದ್ದ ಲೋಕಾಯುಕ್ತವನ್ನು ತ್ರಿಶಂಕು ಸ್ಥಿತಿಯಲ್ಲಿ ಇಟ್ಟು ಭ್ರಷ್ಟರನ್ನು ರಕ್ಷಿಸುವ ಎಸಿಬಿಯಂತಹ ತನಿಖಾ ಸಂಸ್ಥೆಯನ್ನು ಜನತೆಯ ನೂರಾರು ಕೋಟಿ ವ್ಯಯಿಸಿ ಸಾಕುವ ಪ್ರಮೇಯ ರಾಜ್ಯದ ಜನರಿಗೆ ಬೇಕಾಗಿಲ್ಲ, ಆದ್ದರಿಂದ ಎಸಿಬಿಯನ್ನು ರದ್ದುಪಡಿಸಿ, ಲೋಕಾಯುಕ್ತವನ್ನು ಬಲಪಡಿಸಲು ಕೆ ಆರ್ ಎಸ್ ಪಕ್ಷ ಹೋರಾಟ ಮುಂದುವರೆಸುತ್ತದೆ, ಎಸಿಬಿ ಮತ್ತು ಇತರ ತನಿಖಾ ಸಂಸ್ಥೆಗಳು ಕಾನೂನಾತ್ಮಕವಾಗಿ ಕೆಲಸ ಮಾಡುವವರಿಗೆ ಕೆಲಸವನ್ನು ರಾಜ್ಯದ ಜನತೆಯ ಜೊತೆಗೆ ಕೆಆರ್‌ಎಸ್ ಪಕ್ಷದ ಸೈನಿಕರು ಮಾಡುತ್ತಾರೆ. ಕ್ಯಾರೆ ಪಕ್ಷದ ಗುರಿ ರಾಜ್ಯದ ಜನತೆಗೆ ಭ್ರಷ್ಟಾಚಾರ ರಹಿತ, ಉತ್ತಮ ಆಡಳಿತ ನೀಡುವುದಾಗಿದೆ, ಆ ನಿಟ್ಟಿನಲ್ಲಿ ಕೆ ಆರ್ ಎಸ್ ಪಕ್ಷ ನಿರಂತರ ಹೋರಾಟ ಮಾಡುತ್ತದೆ" ಎಂದು ಹೇಳಿದರು.

ಈ ಧರಣಿ ಮತ್ತು ಎಸಿಬಿ ಮುತ್ತಿಗೆ ರಾಜ್ಯದ ನಾನಾ ಭಾಗಗಳಿಂದ ನೂರಾರು ಕಾರ್ಯಕರ್ತರು ಆಗಮಿಸಿದ್ದರು. ಸಭೆಯ ನಂತರ ರವಿ ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ಎಸಿಬಿಗೆ ಮುತ್ತಿಗೆ ಹಾಕಿ ಬೀಗ ಹಾಕಲು ಮುಂದಾದಾಗ ಪೊಲೀಸರು ಅವರನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಿದರು. ಈ ಧರಣಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ. ಎನ್., ರಾಜ್ಯ ಕಾರ್ಯದರ್ಶಿಗಳಾದ ಸೋಮದುಂದರ್, ರಮೇಶ್ ಜಿ. ಎನ್., ರಘು ಜಾಣಗೆರೆ, ಮಲ್ಲಿಕಾರ್ಜುನ ಭಟ್ಟರಹಳ್ಳಿ, ಅರವಿಂದ ಕೆ. ಬಿ., ಕೆ. ಪ್ರಸನ್ನ, ಸಂಘಟನಾ ಕಾರ್ಯದರ್ಶಿಗಳಾದ ಸೊಣ್ಣಪ್ಪಗೌಡ, ಗಂಗಾಧರ್ ಕರೀಕೆರೆ, ಎಸ್ ಸಿ ಮತ್ತು ಎಸ್ ಟಿ ಘಟಕದ ಅಧ್ಯಕ್ಷರಾದ ಒಬಳೇಶಪ್ಪ, ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷರಾದ ಮಂಜುನಾಥ್ ಎಸ್, ಸಾಮಾಜಿಕ ಹೋರಾಟಗಾರರಾದ ಎಚ್. ಎಂ. ವೆಂಕಟೇಶ್, ಬಿ. ಎಚ್. ಸುರೇಶ್ ಹಾಗೂ ಪಕ್ಷದ ನಾನಾ ಪದಾಧಿಕಾರಿಗಳು ಭಾಗವಹಿಸಿದ್ದರು.

ವಂದನೆಗಳು

ದೀಪಕ್ ಸಿ ಎನ್

ಪ್ರಧಾನ ಕಾರ್ಯದರ್ಶಿ

ಕೆ ಆರ್ ಎಸ್ ಪಕ್ಷ

9449559451